LI & FUNG

# ಸರಬರಾಜುದಾರರ ನೀತಿ ಸಂಹಿತೆ

ಲೀ ಮತ್ತು ಫಂಗ್ (ಟ್ರೇಡಿಂಗ್) ಲಿ. ನ (ಲೀ ಮತ್ತು ಫಂಗ್) ಕಾರ್ಯಚಟುವಟಿಕೆಗಳು, ತನ್ನ ಗ್ರಾಹಕರ ಪರವಾಗಿ ಜಗತ್ತಿನಾದ್ಯಂತ ಹೊಂದಿರುವಂತಹ ಸರಬರಾಜುದಾರರನ್ನು ಅವಲಂಬಿಸಿವೆ. ನಾವು ಉದ್ಯೋಗಿಗಳಿಗೆ ನೀಡಬೇಕಾದ ಘನತೆ ಮತ್ತು ಗೌರವವನ್ನು ಎತ್ತಿಹಿಡಿಯಲು, ಮತ್ತು ಜವಾಬ್ದಾರಿಯುತ ಪರಿಸರೀಯ ಆಚರಣೆಗಳನ್ನು ಪ್ರೋತ್ಸಾಹಿಸಲು ಅಗತ್ಯವಿರುವ ಸುರಕ್ಷಿತ ಕಾರ್ಯ ಪರಿಸರವನ್ನು ನಿರ್ಮಿಸುವ ಸಲುವಾಗಿ ನಮ್ಮ ಜಾಗತಿಕ ಸರಬರಾಜು ಸರಪಳಿಯೊಂದಿಗೆ ಕಾರ್ಯನಿರ್ವಹಿಸುತ್ತೇವೆ.

ನಮ್ಮ ಸರಬರಾಜುದಾರರ ನೀತಿ ಸಂಹಿತೆ ಮತ್ತು ಅದರೊಂದಿಗಿರುವ ಮಾನದಂಡಗಳು, ನಮ್ಮ ಸರಬರಾಜುದಾರರು ಎತ್ತಿಹಿಡಿಯಬೇಕೆಂದು ನಾವು ನಿರೀಕ್ಷಿಸುತ್ತಿರುವ ತತ್ವಗಳು ಮತ್ತು ಆಚರಣೆಗಳನ್ನು ವಿವರಿಸುತ್ತವೆ.  ಸ್ಥಳೀಯ, ರಾಷ್ಟ್ರೀಯ ಕಾನೂನು/ನಿಬಂಧನೆಗಳು, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ(ಐಎಲ್ ಓ) ಮೂಲ ರೀತಿನೀತಿಗಳು, ಮತ್ತು ಅಂತರರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಔದ್ಯೋಗಿಕ ಆರೋಗ್ಯ, ಸುರಕ್ಷತೆ ಮತ್ತು ಪರಿಸರೀಯ ಮಾನದಂಡಗಳಿಗನುಸಾರವಾಗಿ ನಿರ್ಮಿಸಲಾದ ಈ ನೀತಿ ಸಂಹಿತೆ, ಇದನ್ನು ಗೌರವಿಸಿ ತಮ್ಮ ಕಾರ್ಯಾಚರಣೆಯಲ್ಲಿ ಇದನ್ನು ಅಳವಡಿಸಿಕೊಳ್ಳುವ ಸರಬರಾಜುದಾರರಿಂದ ನಾವು ಪಡೆಯುವಂತಹ ಮೂಲ ಸರಕುಗಳೆಡೆಗೆ ನಾವು ಹೊಂದಿರುವಂತಹ ಬದ್ಧತೆಯನ್ನು ತೋರುತ್ತದೆ.

ವಿಭಿನ್ನ ವಿಭಾಗಗಳಲ್ಲಿ ಕಾರ್ಯನಿರ್ವಹಿಸುವ ಸರಬರಾಜುದಾರರ ಉದ್ಯೋಗಿಗಳು ಭಿನ್ನ ರೀತಿಯ ಕಾರ್ಯಪ್ರವೃತ್ತಿಯನ್ನು ಹೊಂದಿದ್ದರೂ ಕೂಡ,  ಸರಬರಾಜುದಾರರ ಈ ನೀತಿ ಸಂಹಿತೆ ಲೀ ಮತ್ತು ಫಂಗ್ ಗುತ್ತಿಗೆಗಾಗಿ ಬಳಸಲಾದ ಎಲ್ಲಾ ಕಾರ್ಯಸ್ಥಳಗಳಿಗೆ ಮತ್ತು  ಆ ಸಂಬಂಧವಾಗಿ ಕಾರ್ಯಸ್ಥಳದಲ್ಲಿ ಒದಗಿಸಲಾದ ವಸತಿ ಸೌಲಭ್ಯಗಳಿಗೆ ಅನ್ವಯವಾಗುತ್ತದೆ.

## ಆಡಳಿತ ಮಂಡಳಿಯ ವ್ಯವಸ್ಥೆಗಳು

- ಸರಬರಾಜುದಾರರ ಆಡಳಿತ ಮಂಡಳಿ ಅಪಾಯ ಮತ್ತು ಕುಂದುಕೊರತೆಗಳನ್ನು ನಿರ್ವಹಿಸಲು ನಿಯಮಾವಳಿಗಳನ್ನು ಮತ್ತು ವ್ಯವಸ್ಥೆಯನ್ನು ರೂಪಿಸುತ್ತದೆ.

## ಆರೋಗ್ಯ ಮತ್ತು ಸುರಕ್ಷತೆಯ ಆಚರಣೆಗಳು

- ಪರವಾನಗಿಗಳು, ಅನುಮತಿಪತ್ರಗಳು ಮತ್ತು ಪ್ರಮಾಣಪತ್ರಗಳು ಕಾನೂನುಬದ್ಧವಾಗಿ ಅಗತ್ಯವಿರುವಂತೆ ನಿಖರವಾಗಿವೆ, ಸಂಪೂರ್ಣವಾಗಿವೆ ಮತ್ತು  ನವೀಕರಿಸಲ್ಪಟ್ಟಿವೆ. ಎಲ್ಲಾ ಸೂಚನಪತ್ರಗಳು ಕಾನೂನಿನ ನಿಬಂಧನೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ಸೂಕ್ತ ಸಿಬ್ಬಂದಿವರ್ಗ ತುರ್ತು ಪ್ರತಿಕ್ರಿಯೆ ಮತ್ತು ಆರೋಗ್ಯ ಹಾಗು ಸುರಕ್ಷತೆಯನ್ನು ಕಾಯ್ದುಕೊಳ್ಳಲು ಜವಾಬ್ದಾರರಾಗಿರುತ್ತಾರೆ.
- ಸರಬರಾಜುದಾರರು ಕಾನೂನಿನ ಅಗತ್ಯತೆಗಳನ್ನು ಪೂರೈಸುವಂತಹ ಅಥವಾ ಮೀರುವಂತಹ ತುರ್ತು ಮತ್ತು ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಅನ್ವಯಿಸುತ್ತಾರೆ ಮತ್ತು ನಿರ್ವಹಿಸುತ್ತಾರೆ.
- ಸರಬರಾಜುದಾರರು ಕಾನೂನಿನ ಅಗತ್ಯತೆಗಳನ್ನು ಪೂರೈಸುವಂತಹ ಅಥವಾ ಮೀರುವಂತಹ ಪ್ರಥಮ ಚಿಕಿತ್ಸೆ ಮತ್ತು ವೈದ್ಯಕೀಯ ಆರೈಕೆಯನ್ನು ಒದಗಿಸುತ್ತಾರೆ.
- ಸರಬರಾಜುದಾರರು ಕಾನೂನಿನ ಅಗತ್ಯತೆಗಳನ್ನು ಪೂರೈಸುವ ಅಥವಾ ಮೀರುವ ರೀತಿಯಲ್ಲಿ ಉದ್ಯೋಗಿಗಳಿಗೆ ಆಗುವಂತಹ ಮತ್ತು ಘಟಕದಲ್ಲಿ ಆಗುವಂತಹ ಅಪಘಾತಗಳನ್ನು ವರದಿಮಾಡುತ್ತಾರೆ, ಅದರ ತಪಾಸಣೆಯನ್ನು ನಡೆಸುತ್ತಾರೆ ಮತ್ತು ಅದನ್ನು ಬಗೆಹರಿಸುತ್ತಾರೆ.
- ವೈಯಕ್ತಿಕ ರಕ್ಷಣ ಸಾಧನಕ್ಕೆ ಸಂಬಂಧಿಸಿದ ನಿಯಮಾವಳಿಗಳು, ತರಬೇತಿ, ನಿಬಂಧನೆ, ನಿರ್ವಹಣೆ ಮತ್ತು ಬಳಕೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ಸೀಮಿತ ಸ್ಥಳಗಳು ಮತ್ತು ನೆಲದ ಮೇಲಿನ ಮತ್ತು ನೆಲದಡಿಯ ಸಂಗ್ರಹಣೆ(ಎ ಎಸ್ ಟಿ ಮತ್ತು ಯು ಎಸ್ ಟಿ)ಗೆ ಸಂಬಂಧಿಸಿದ ನಿಯಮಾವಳಿಗಳು ಮತ್ತು ತರಬೇತಿಯನ್ನು ಒದಗಿಸಲಾಗಿದೆ.
- ರಾಸಾಯನಿಕಗಳು ಮತ್ತು ಅಪಾಯಕಾರಿ ವಸ್ತುಗಳ ನಿರ್ವಹಣೆ, ನಿಯಮಾವಳಿಗಳು, ತರಬೇತಿ, ಸಂಗ್ರಹಣೆ ಮತ್ತು ಬಳಕೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ನಿಯೋಜಿತ ಪ್ರದೇಶಗಳಲ್ಲಿ ಧೂಮಪಾನ ಮಾಡುವುದು ಮತ್ತು ಬೆಂಕಿಯ ಕಿಡಿ, ಬೆಂಕಿ, ಉರಿಯನ್ನು ಒಳಗೊಂಡ ಚಟುವಟಿಕೆಗಳನ್ನು ನಿಷೇಧಿಸಲಾಗಿರುತ್ತದೆ.
- ಸುರಕ್ಷತಾ ಸಾಧನದ ನಿರ್ವಹಣೆ, ನಿಯಮಾವಳಿಗಳು, ತರಬೇತಿ ಮತ್ತು ಸಂರಕ್ಷಣೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ವಿದ್ಯುತ್ ಘಟಕಗಳು ಮತ್ತು ವ್ಯವಸ್ಥೆಗಳನ್ನು ಸೂಕ್ತವಾಗಿ ನಿರ್ವಹಿಸಲಾಗುತ್ತದೆ.
- ಶಬ್ದದ ಮಟ್ಟಗಳನ್ನು ಕಾನೂನಿನ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ನಿಯಂತ್ರಿಸಲಾಗುತ್ತದೆ.
- ಸರಬರಾಜುದಾರರು ಸಾಕಷ್ಟು, ಗಾಳಿ ಬೆಳಕು ಇರುವಂತಹ ಕಾರ್ಯಸ್ಥಳವನ್ನು ನಿರ್ವಹಿಸುತ್ತಾರೆ ಮತ್ತು ಕಾರ್ಯಸ್ಥಳದ ತಾಪಮಾನವನ್ನು ಕಾನೂನಿನ ಅಗತ್ಯತೆಗಳನ್ನು ಪೂರೈಸುವ ಅಥವಾ ಮೀರುವಂತಹ ರೀತಿಯಲ್ಲಿ ನಿಯಂತ್ರಿಸುತ್ತಾರೆ.
- ಸರಬರಾಜುದಾರರು ಸ್ವಚ್ಛವಾದ ಕಾರ್ಯ ಪರಿಸರವನ್ನು ನಿರ್ವಹಿಸುತ್ತಾರೆ ಮತ್ತು ಉದ್ಯೋಗಿಗಳಿಗೆ ಕುಡಿಯುವ ನೀರು, ವಿಶ್ರಾಂತಿ ಕೊಠಡಿಗಳು ಮತ್ತು ಸ್ನಾನಗೃಹದಂತಹ ಸೌಲಭ್ಯಗಳನ್ನು ಕಾನೂನಿನ ಅಗತ್ಯತೆಗಳನ್ನು ಪೂರೈಸುವ  ಅಥವಾ ಮೀರುವ ರೀತಿಯಲ್ಲಿ ನೀಡುತ್ತಾರೆ.
- ಆಹಾರವನ್ನು ಸಿದ್ಧಪಡಿಸುವ ಸ್ಥಳಗಳು ಮತ್ತು ಮಕ್ಕಳ ಆರೈಕೆಯ ಸೌಲಭ್ಯಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಮತ್ತು ಮೀರುತ್ತವೆ.
- ಕಟ್ಟಡ ಮತ್ತು ನಿರ್ಮಾಣದ ಅನುಮತಿಪತ್ರಗಳನ್ನು ನಿರ್ವಹಿಸಲಾಗಿದೆ ಮತ್ತು ಅವು ನಿಖರವಾಗಿವೆ.
- ಸರಬರಾಜುದಾರರು ದಕ್ಷತಾಶಾಸ್ತ್ರ ಅಪಾಯ ಕಾರ್ಯಕ್ರಮಗಳನ್ನು ಜಾರಿಗೆತರುತ್ತಾರೆ ಮತ್ತು ದಕ್ಷತಾಶಾಸ್ತ್ರದ ಬಗ್ಗೆ ಉದ್ಯೋಗಿಗಳಲ್ಲಿ ಅರಿವನ್ನು ಮೂಡಿಸಲು ಅಗತ್ಯ ತರಬೇತಿಯನ್ನು ನೀಡುತ್ತಾರೆ.
- ವಸತಿ ಸೌಲಭ್ಯದ ಸ್ಥಿತಿಗತಿಗಳು ಮತ್ತು ತುರ್ತು ಮತ್ತು ಸುರಕ್ಷತಾ ಮುನ್ನೆಚ್ಚರಿಕೆಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.

## ಕಾರ್ಮಿಕ ಆಚರಣೆಗಳು

- ವ್ಯವಹಾರದ ಪರವಾನಗಿಗಳು ಕಾನೂನಿಗನುಸಾರವಾಗಿ ನಿಖರವಾಗಿವೆ, ಮಾನ್ಯವಾಗಿವೆ ಮತ್ತು ನವೀಕರಿಸಲ್ಪಟ್ಟಿವೆ. ಎಲ್ಲಾ ನೇಮಕಾತಿಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ಎಲ್ಲಾ ನೇಮಕಾತಿ ಮತ್ತು ವಜಾಗೊಳಿಸುವ ಪ್ರಕ್ರಿಯೆಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ. ಸರಬರಾಜುದಾರರು ಮಾನವ ಕಳ್ಳಸಾಗಾಣಿಕೆಯ ಅಪಾಯವನ್ನು ತಗ್ಗಿಸಲು ಕಟ್ಟುನಿಟ್ಟಾದ ನೇಮಕಾತಿ ಪ್ರಕ್ರಿಯೆಗಳನ್ನು ಜಾರಿಗೆ ತರುತ್ತಾರೆ.
- ಉದ್ಯೋಗಿಗೆ ಪಾವತಿಸಲಾಗುವ ಪರಿಹಾರಧನ ಮತ್ತು ವೇತನ ಪಟ್ಟಿಗೆ ಸಂಬಂಧಿಸಿದ ದಾಖಲೆ ಪತ್ರಗಳ ನಿರ್ವಹಣೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತದೆ ಅಥವಾ ಮೀರುತ್ತದೆ.
- ಉದ್ಯೋಗಿಗಳಿಗೆ ಒದಗಿಸಲಾಗುವ ಸೌಲಭ್ಯಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ.
- ಉದ್ಯೋಗಿಗಳ ಕಾರ್ಯಾವಧಿ ಮತ್ತು ಸಮಯಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳ ನಿರ್ವಹಣೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತದೆ.
- ಒಪ್ಪಂದದ ಮೇರೆಗೆ, ಬಲವಂತವಾಗಿ, ಬಂಧನದಲ್ಲಿಟ್ಟು, ಗುಲಾಮರಂತೆ ಕೆಲಸ ಮಾಡಿಸಿಕೊಳ್ಳುವುದನ್ನು ಮತ್ತು ಕೈದಿಗಳಿಂದ ಕೆಲಸ ಮಾಡಿಸಿಕೊಳ್ಳಿವುದನ್ನು ನಿಷೇಧಿಸಲಾಗಿದೆ.
- 15 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಮಕ್ಕಳ, ಅಪ್ರೆಂಟಿಸ್ ಮತ್ತು ತರಬೇತಾರ್ಥಿಗಳ ಉದ್ಯೋಗ ನಿರ್ವಹಣೆ ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತದೆ.
- ನಿಂದಿಸುವುದು, ದಬ್ಬಾಳಿಕೆ ನಡೆಸುವುದು, ಕಿರುಕುಳ ನೀಡುವುದು ಮತ್ತು ಅಸಮಂಜಸವಾದ ಶಿಸ್ತು ಕ್ರಮಗಳನ್ನು ನಿಷೇಧಿಸಲಾಗಿದೆ.
- ತಾರತಮ್ಯ ಆಚರಣೆಗಳನ್ನು ನಿಷೇಧಿಸಲಾಗಿದೆ.
- ಸಂಘಟನೆಯನ್ನು ರಚಿಸುವ ಸ್ವಾತಂತ್ರ್ಯ ಹಕ್ಕು ಮತ್ತು ಸಾಮೂಹಿಕ ಚರ್ಚೆಯನ್ನು ನಡೆಸುವ ಹಕ್ಕನ್ನು ಗೌರವಿಸಬೇಕು.

## ಪರಿಸರೀಯ ಆಚರಣೆಗಳು

- ಪರಿಸರಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾದ ನಿರ್ವಹಣೆ, ನಿಯಮಾವಳಿ ಮತ್ತು ನೇಮಕಾತಿಗಳು ಕಾನೂನಿನ ಅಗತ್ಯತೆಗಳನ್ನು ಪೂರೈಸುತ್ತವೆ ಅಥವಾ ಮೀರುತ್ತವೆ.
- ಸರಬರಾಜುದಾರರು ಪರಿಸರದ ಮೇಲೆ ಬೀರುವಂತಹ ದುಷ್ಪರಿಣಾಮಗಳನ್ನು ತಗ್ಗಿಸುತ್ತಾರೆ, ತ್ಯಾಜ್ಯವನ್ನು ಕಡಿಮೆ ಮಾಡುತ್ತಾರೆ ಮತ್ತು ಮಾಲಿನ್ಯವನ್ನು ತಡೆಗಟ್ಟುತ್ತಾರೆ.

## ಹೊಣೆಗಾರಿಕೆ, ಪಾರದರ್ಶಕತೆ ಮತ್ತು ನೈತಿಕತೆಗಳು

- ಸರಬರಾಜುದಾರರು ಅನುಸರಣೆಯಾಗದ ಸಂಗತಿಗಳನ್ನು ಸುಧಾರಿಸುವುದರೆಡೆಗೆ ಎಷ್ಟರ ಮಟ್ಟಿಗೆ ತೊಡಗಿಸಿಕೊಂಡಿದ್ದಾರೆ ಮತ್ತು ಬದ್ಧರಾಗಿದ್ದಾರೆ ಎಂಬುದರ ಪರಿಶೀಲನೆಗಾಗಿ ಘಟಕದ ಭೇಟಿಗೆ ಅವಕಾಶ ಮಾಡಿಕೊಡುತ್ತಾರೆ.
- ಉಪಗುತ್ತಿಗೆ ಮತ್ತು ಮನೆಕೆಲಸಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಬಹಿರಂಗಪಡಿಸಬೇಕು ಮತ್ತು ಕಾರ್ಖಾನೆಯು ಲಿ  ಮತ್ತು ಫಂಗ್ ಮತ್ತು /ಅಥವಾ ಅದರ ಗ್ರಾಹಕರಿಂದ ಪಡೆದಂತಹ ಲಿಖಿತ ಅನುಮತಿಯನ್ನು ನಿರ್ವಹಿಸಬೇಕು.
- ಲಿ ಮತ್ತು ಫಂಗ್ ಉದ್ಯೋಗಿಗೆ ಅಥವಾ ಲಿ  ಮತ್ತು ಫಂಗ್ ಗೊತ್ತುಮಾಡಿರುವಂತಹ ಪ್ರತಿನಿಧಿಗೆ ಮೋಸಮಾಡುವುದು, ಲಂಚನೀಡುವುದು ಮತ್ತು ಅವರ ಮೇಲೆ ಅನುಚಿತ ಪ್ರಭಾವ ಬೀರುವುದನ್ನು ನಿಷೇಧಿಸಲಾಗಿದೆ.